# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 354 (499) |
| ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸ ಬೇಕಾದ ದಿನಾಂಕ | : | 19.02.2024 |
| ಉತ್ತರಿಸಬೇಕಾದ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ಅಧಿನಿಯಮ 2011ರ ಅಧಿಸೂಚನೆ ಸಂ: ಸಂವ್ಯಾಶಾಇ. 22:ಶಾಸನ 2011 ದಿನಾಂಕ:06.04.2011 ರನ್ವಯ ಒಂದು ಬಾರಿಯ ಕ್ರಮ ಆದ ಮೇಲೆ ಕೋರ್ಸಿಗೆ ಸಂಬಂಧಪಟ್ಟ ಎಲ್ಲಾ ನೌಕರರನ್ನು ವಿಲೀನಗೊಳಿಸದೆ ಐದು ವರ್ಷ ಮೇಲ್ಪಟ್ಟವರಿಗೆ ಮಾತ್ರ ಎಂದು ಹೇಗೆ ಸೂಚಿಸಲಾಗಿದೆ; | ವಿಲೀನ ವಿಧೇಯಕ ಅದಿಸೂಚನೆ ಸಂಖ್ಯೆ: ಸಂವ್ಯಶಾಇ 22: ಶಾಸನ 2011: ಬೆಂಗಳೂರು: ದಿನಾಂಕ: 06.04.2011 ರನ್ವಯ ಕ್ರಮವಹಿಸಲಾಗಿದೆ |
| ಆ) | ಸರ್ಕಾರವೇ ವೃತ್ತಿ ಶಿಕ್ಷಣವನ್ನು ಕಡೆಗಣಿಸಿದ್ದು ಎಲ್ಲರಿಗೂ ಒಂದೇ ನ್ಯಾಯ ಒಂದೇ ಕಾನೂನು ಮಾಡದೇ ಇರುವುದಕ್ಕೆ ಕಾರಣವೇನು; | ಕರ್ನಾಟಕ ರಾಜ್ಯದಲ್ಲಿನ ಪದವಿ ಪೂರ್ವ ಶಿಕ್ಷಣದಲ್ಲಿರುವ ವೃತ್ತಿ ಆಧಾರಿತ ಕೋರ್ಸುಗಳಲ್ಲಿ \| ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ |

| | | |
|---|---|---|
| | | ನೌಕರರುಗಳನ್ನು ವಿಲೀನಗೊಳಿಸುವ ಅಧಿನಿಯಮ ಸಂಖ್ಯೆ:ಸಂವ್ಯಶಾಇ 22 ಶಾಸನ 2011, ದಿನಾಂಕ:06.04.2011 ರಂದು ಜಾರಿಗೆ ಬಂದಿದ್ದು, ಈ ವಿಧೇಯಕದಲ್ಲಿ ವಿಧಿಸಿರುವ ಷರತ್ತುಗಳ ಆಧಾರದ ಮೇಲೆ ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಉಪನ್ಯಾಸಕರನ್ನು ವಿಲೀನ ವಿಧೇಯಕದನ್ವಯ ದಿನಾಂಕ:06.04.2011 ನಿರಂತರವಾಗಿ 05 ವರ್ಷಗಳ ಸೇವೆ ಸಲ್ಲಿಸಿರುವ ನೌಕರರುಗಳನ್ನು ವಿವಿಧ ಇಲಾಖೆಗಳಲ್ಲಿ ವಿಲೀನಗೊಳಿಸಲಾಗಿದೆ. ವಿಲೀನಗೊಂಡ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರನು ಕರ್ತವ್ಯಕ್ಕೆ ಹಾಜರಾದ ನಂತರ, ಈ ಅಧಿನಿಯಮದ ಅಡಿಯಲ್ಲಿ ಆತನ ಪ್ರಾರಂಭಿಕ ಮೂಲ ವೇತನವನ್ನು, ಆತನು ವಿಲೀನಗೊಂಡ ಹುದ್ದೆಯ ಪ್ರವರ್ಗದ ಕಾಲಿಕ ವೇತನ ಶ್ರೇಣಿಯ ಕನಿಷ್ಟಕ್ಕೆ ನಿಗಧಿಗೊಳಿಸತಕ್ಕದ್ದು ಹಾಗೂ ತನ್ನ ವಿಲೀನಕ್ಕೆ ಮೊದಲು ಸಲ್ಲಿಸಿದ ಸೇವೆಯನ್ನು ವೇತನ, ಜೇಷ್ಠತೆ ಹಾಗೂ ರಜೆ ಅಥವಾ ಪಿಂಚಣಿಗೆ ಸಂಬಂಧಿಸಿದಂತೆ ಲೆಕ್ಕಕ್ಕೆ ತೆಗದುಕೊಳ್ಳತಕ್ಕದಲ್ಲ ಎಂಬ ಷರತ್ತು ವಿಧಿಸಲಾಗಿದೆ. |

| | | |
|---|---|---|
| ಇ) | ವಿಲೀನಾತಿಯಿಂದ ವಂಚಿತರಾಗಿರುವ ನೌಕರರಿಗೆ ಸರ್ಕಾರದಿಂದ ದೊರೆತಿರುವ ಪರಿಹಾರವೇನು; | ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲಿನಗೊಳಿಸುವ ವಿಲೀನ ವಿಧೇಯಕ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22: ಶಾಸನ 2011: ಬೆಂಗಳೂರು: ದಿನಾಂಕ: 06.04.2011 ರನ್ವಯ ವಿಲೀನಗೊಳಿಸಲಾಗಿದೆ. |
| ಈ) | 5 ವರ್ಷಗಳ ಸೇವೆ ಸಲ್ಲಿಸಿದ ನೌಕರರುಗಳು ವಯೋಮಿತಿ ಮೀರಿದವರಾಗಿದ್ದು ಇವರ ಸಮಸ್ಯೆ ಬಗೆಹರಿಸಲು ಮತ್ತು ಪರಿಹಾರ ನೀಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? | ಈಗಾಗಲೇ 5 ವರ್ಷ ನಿರಂತರ ಸೇವೆ ಸಲ್ಲಿಸಿರುವ ನೌಕರರುಗಳಿಗೆ ಕರ್ನಾಟಕ ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು ವಿಲೀನಗೊಳಿಸುವ ವಿಲೀನ ವಿಧೇಯಕ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 22: ಶಾಸನ 2011: ಬೆಂಗಳೂರು: ದಿನಾಂಕ: 06.04.2011 ರನ್ವಯ ವಿಲೀನಗೊಳಿಸಲಾಗಿದೆ. |

**ಸಂಖ್ಯೆ:ಇಪಿ 08 ಟಿವಿಇ 2024**

**(ಎಸ್.ಮಧುಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ
ಸಚಿವರು